ಮಧುಗಿರಿಯ ಸುದ್ದೇಕುಂಟೆ ಹಳ್ಳಿಯವರಾದ ವಿಜಯಾ ಮೋಹನ್ ವೃತ್ತಿಯಿಂದ ಶಿಕ್ಷಕಿ. ಆದರೆ ಕನ್ನಡ ಸಾಹಿತ್ಯ ಲೋಕವನ್ನು ಪ್ರೀತಿಸುತ್ತ, ಕಥಾ ಪ್ರಕಾರದಲ್ಲಿ ಸಾಹಿತ್ಯ ಕೃಷಿ ಮಾಡುತ್ತಿದ್ದಾರೆ. 'ತಬ್ಬಲಿ ಸಾರು', 'ಕಣ್ಣಿ', 'ಜಾತಿ', 'ನೀರು', 'ವೋಟು', 'ಮೇವು' ಪ್ರಕಟಿತ ಕಥಾಸಂಕಲನಗಳು. ಅವರ ಕೃತಿಗಳಿಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಸಂದಿವೆ.

ಉಳ್ಳಾಡುವಷ್ಟು ಜಮೀನು ಮಸ್ತಾಗೈತೆ. ಅವನೇನು ಮುಂದುಕ್ಕೋದೋದು ಬ್ಯಾಡ. ಮೂರುಕಾಸು ದುಡಿಯಾಕಾಗಿ ಊರುಕೇರಿ ಬಿಟ್ಕೋಗೋದು ಬ್ಯಾಡ' ಎಂದ ಅಜ್ಜಿಯು ಮಗನೆಂದರೆ ಮಸ್ತಾಗಿ ಮೋಹದ ಮಂಕರಿಯಲ್ಲಿ ಒದ್ದಾಡುತ್ತಿದ್ದವಳು ಮಗನು ಕಟ್ಟಕೊಂಡ ಆಸೆಗಳ ಗೆಜ್ಜೆಗೆ ಸರಿಯಾಗಿ ಮಮಕಾರದ ತಾಳ ಹಾಕಿದಳಂತೆ.

'ಬ್ಯಾಡಕಣಪ್ಪ ಇಲ್ಲೆ ಹುಲ್ಲು ಸೊಪ್ಪು, ದನಾಕರ ಅಂಬೊ ಬದುಕುನೋಡಿಕೊಂಡಿದ್ದು ಬಿಡು. ಉಂಡು ಉಗುಳೊವಷ್ಟು ಇರುವಾಗ ಕಾಣದ ಸೀಮೆಗೆ ನಿನ್ನೊಬ್ಬನ್ನೆ ಕಳಿಸಿ ನಾನೆಂಗಿರಲೊ ಮಾರಾಯ?' ಅಂತ ಅಳುತಾ ಕುಂತಳಂತೆ. ಅಪ್ಪ ಊರಲ್ಲಿ ದೇಸಿ ಆಟಗಳಾದ ಚೌಕಾಬಾರ, ಗಲ್ಲೋರಿ, ಉಯ್ಯಾಲೆ ಹಬ್ಬಗಳ ದಿನದಂದು ಆಡುವ ಕೋಲಾಟ ಗುಂಡು ಎಸೆತ, ದುಡ್ಡಿನಾಟ ಎಂಬ ಆವತ್ತಿನ ಆಟೋಟದ ಲೋಕದಲ್ಲಿ ಮೈಮರೆತು ಮುಳುಗಿರುತ್ತಿದ್ದ. ಊರ ಗುಂಡಯ್ಯನ ತೋಪಿನ ವಂಗೆಮರದ ಕೆಳಗೆ ಆಗತಾನೆ ಇಸ್ಪೀಟೆಲೆಗಳನ್ನ ಬೆರಳುಗಳ ನಡುವೆ ಜೋಡಿಸಿಕೊಂಬುವುದನ್ನ ಕಲಿಯುತ್ತಿದ್ದ ವರ್ಷವೆ, ಇತ್ತ ಕೆಲಸವು ಮಾಡದಂಗೆ ಓದಲು ಹೋಗದಂಗೆ ಅತಂತ್ರದ ದಿನಗಳಲ್ಲಿ ಅಜ್ಜಿಕೊಡುತ್ತಿದ್ದ ಆಣೆ ಪೈಸೆಗಳಲ್ಲಿ ಆಡಲುಕುಂತು ಬಿಡುತ್ತಿದ್ದನಂತೆ. ಒಂದುದಿನ ಊರಲ್ಲಿನ ಮಗ್ಗೋಡೆಯಲ್ಲಿ ಉಯ್ಯಾಲೆಯಾಟದಲ್ಲಿ ನರಸಿಂಹಪ್ಪನ ಮಗಳು ಗೌರಿ ಎಂಬ ನಾಯಕರುಡುಗಿ ಹಾಕಿದ್ದ ಕೊಂಬೆಯ ಮೇಲೆಯೆ ಅಪ್ಪನು ಉಯ್ಯಾಲೆಯ ಹಗ್ಗವನ್ನ ಹಾಕಿದನೆಂದು ಇಬ್ಬರಿಗು ಬೆಳೆದ ಮಾತುಗಳ ಜಿದ್ದಾ ಜಿದ್ದಿಯಲ್ಲಿ ಜಗಳ ಮುಗಿಲಿಗೋಗಿತ್ತಂತೆ. 'ಲೇ ಯಾಕಮ್ಮಣ್ಣಿ ನನ್ನಕೊಂಬೆಗೆ ಹಗ್ಗ ಹಾಕಿದ್ದೀಯಾ ನಾನೆಂಗ್ ಆಡ್ ಬೇಕು?' ಅಂದವನ ಮಾತಿಗೆ, 'ಯಾವುದಪ್ಪ ನಿನ್ ಕೊಂಬೆ ನೀನೆಲ್ಲಿ ರಿಜಿಸ್ಟ್ರು ಮಾಡಸಿದ್ದೀಯಪ್ಪ? ತೋರುಸು' ಅಂದಂಳಂತೆ. 'ಈಗ್ ಹಗ್ಗ ಬಿಚ್ಚುತ್ತೀಯೊ ಇಲ್ಲಕುಯ್ಯುದಾಕ್ಲೊ' ಎಂದು ಜಿದ್ದಿಗೆ ಬಿದ್ದ ವೀರಾವೇಶದ ಅಪ್ಪನನ್ನು ಗೌರಿಯು ಕೂಡ ಅವಳ ಲಂಗ ದಾವಣಿಯನ್ನ ಸ್ವಲ್ಪ ಮೇಲಕ್ಕೆತ್ತಿ ಸಿಕ್ಕಿಸಿಕೊಂಡು, 'ನೋಡಾನ್ ಬಾರ್ಲ ನಿನಗೆ ದಮ್ಮಿದ್ರೆ ಅದೆಂಗ್ ಕುಯ್ಯುತ್ತೀಯೋ ನಾನು ನೋಡ್ತೀನಿ' ಎಂದು ಎದುರು ಬದುರು ಜಗಳಕ್ಕೆ ನಿಂತಳಂತೆ. ಸಿಟ್ಟು ತಡೆಯದ ಅಪ್ಪ ಆ ಹುಡುಗಿಯನ್ನ ಕೇಳಬಾರದಂತ ಕೆಟ್ಟ ಮಾತಲ್ಲಿ ಬೈದವನೆಂಬ ಸುದ್ದಿ ಕೇಳಿದ. ಅವಳು ಲಬಲಬನೆ ಬಾಯಿ ಬಡುಕೊಂಡು ಮನೆಕಡೆ ಓಡಿ ಹೋದವಳು. ಅವಳ ಇಬ್ಬರು ಅಣ್ಣಂದಿರ ಮುಂದೆ ಗಳಗಳನೆ ಅತ್ತಳಂತೆ. ತಂಗಿಯಿಂದ ಇಂತದ್ದೊಂದು ರಂಪಾಟ ಕೇಳಿಸಿಕೊಂಡ ಅವಳ ಇಬ್ಬರು ಅಣ್ಣಂದಿರು ಅಪ್ಪನನ್ನು ಇಟ್ಟಾಡಿಸಿಕೊಂಡು ಹೊಡೆಯಲು ಮುಂದಾದರಂತೆ. ಅಂತ ವಿಷಮ ಪರುಸ್ಥಿತಿಯಲ್ಲಿ ಸುದ್ದಿ ಗೊತ್ತಾಗುತ್ತಿದ್ದಂತೆ ಅವರಿಂದ ತಪ್ಪಿಸಿಕೊಂಬಲೋಗಿ ಕೆರೆಯ ಬಯಲಲ್ಲಿನ ಎರಡು ಇಟ್ಟಿಗೆ ಗೂಡಿನ ನಡುವೆಯ ಸಂದಿಯಲ್ಲಿ ಅಪ್ಪ ಬಚ್ಚಿಟ್ಟುಕೊಂಡುಬಿಟ್ಟನಂತೆ. ಹುಡುಗ ಇಷ್ಟೊತ್ತಾದರೂ ಮನೆಗೆ ಬಂದಿಲ್ಲವಲ್ಲ? ಎಂದು ಊರಿನಲ್ಲೆಲ್ಲ ಹುಡುಕಾಡುತ್ತಿದ್ದ ಅಜ್ಜಿಗೂ ಮತ್ತೆ ನಮ್ಮ ತಾತನಿಗೂ ಮನೆಯಿಂದಲ ಮುನಿಯಪ್ಪನೆಂಬೋನು ಬಂದು, 'ಯಣ ನಿಮ್ಮುಡುಗ ಕೆರೇಲಿ ಇಟ್ಟಿಗೆ ಗೂಡುಗಳ ನಡುವೆ ಕುಂತುಬುಟ್ಟವನೆ. ನಾವೆಷ್ಟು ಕರದ್ರು ಎದ್ದು ಬರ್ತಿಲ್ಲ. ಅಲ್ಲಿಹುಳ ಉಪ್ಪಡೆಗಳ ಕಾಟ ಜಾಸ್ತಿ ಐತೆಂಬ ಸುಳಿವು ಸಿಕ್ಕಿ ತಾತ ಆ ಘಳಿಗೇಲೆ ರಾತ್ರೋ ರಾತ್ರಿ ಅಪ್ಪನನ್ನು ಪತ್ತೆ ಮಾಡಿದನಂತೆ. ಅಂಗೆ ಅಪ್ಪ ಪತ್ತೆಯಾದಮೇಲೆ ಊರೊಳಕ್ಕೆ ಕರೆದುಕೊಂಡು ಬರದೆ ಐದು ಮೈಲಿಯ ದೂರದಲ್ಲಿದ್ದ ಅಮ್ಮನ ತಂಗಿ ಅಂದರೆ ಅಪ್ಪನ ಚಿಗಮ್ಮನೂರಿಗೆ ಕಾಲುನಡಿಗೆಯಲ್ಲೆ ಹೋಗಿ ಕುದ್ದಾಗಿ ತಾತನೆ ಬಿಟ್ಟು ಬಂದಿದ್ದನಂತೆ. ಅಲ್ಲಿರುವ ಚಿಕ್ಕಪ್ಪ ವಿಷಪಾತಕದ್ ನನಮಗ ಜಾಸ್ತಿ ದಿನ ಆವರೂರಿನಲ್ಲೆ ಬಿಟ್ಟರೆ ಇಲ್ಲಿಗೆ ಬಂದು ಬೇಕಾದರೆ